# भारतीय जीवन बीमा निगम

# LIFE INSURANCE CORPORATION OF INDIA

## प्रधान मंत्री जन धन योजना

## के तहत जन-धन खाताधारकों

## के लिये रु.30,000/- के

## जीवन बीमा सुरक्षा के

## दावा निपटारा हेतु प्रक्रिया

# PRADHAN MANTRI JAN DHAN YOJANA (PMJDY)

## PROCEDUREFOR CLAIM SETTLEMENT

## UNDER LIFE INSURANCE COVER OF

## Rs.30,000/- FOR PMJDY ACCOUNT HOLDER

## ಪ್ರಧಾನ್ ಮಂತ್ರಿ ಜನ್ ಧನ್ ಯೋಜನೆಯ ಅಡಿಯಲ್ಲಿ ಬ್ಯಾಂಕುಗಳಿಗೆ ಕ್ಲೈಮ್ ಪ್ರಕ್ರಿಯೆಗೊಳಿಸುವಿಕೆಯ ಕಾರ್ಯವಿಧಾನ

### / ವಿಷಯಗಳು


A. ಪೀಠಿಕೆ

B. ವಿವರಣೆಗಳು

C. ಯೋಜನೆಯ ಅಡಿಯಲ್ಲಿ ಪ್ರಯೋಜನಗಳು

D. ಮೂಲಭೂತ ಅರ್ಹತೆಯ ಷರತ್ತುಗಳು

E. ಅನರ್ಹ ವರ್ಗಗಳು

F. ಯೋಜನೆ ರದ್ದುಗೊಳಿಸುವುದು

G. ಕ್ಲೈಮ್ ಇತ್ಯರ್ಥಪಡಿಸುವ ಕಾರ್ಯವಿಧಾನ

H. ಸಾವಿನ ಕುರಿತಾದ ಕ್ಲೈಮ್ ಸೂಚನೆಯನ್ನು ಪಡೆದಾಗ ಬ್ಯಾಂಕುಗಳು ಅನುಸರಿಸುವ ಕಾರ್ಯವಿಧಾನ

I. ಕ್ಲೈಮ್ ಸೂಚನೆಯನ್ನು ಸ್ವೀಕರಿಸಿದಾಗ ಎಲ್‌ಐಸಿ ಅನುಸರಿಸುವ ಕಾರ್ಯವಿಧಾನ.

J. ಅನುಬಂಧಗಳ ಪಟ್ಟಿ

# ಪಿಎಂಜೆಡಿವೈ ಕ್ಲೈಮ್ ಕಾರ್ಯವಿಧಾನ

## A. ಪೀಠಿಕೆ

ಭಾರತದ ಮಾನ್ಯ ಪ್ರಧಾನಮಂತ್ರಿಯವರು 15ನೇ ಆಗಸ್ಟ್, 2014 ರಂದು ಮಾಡಿದ ಸ್ವಾತಂತ್ರ ದಿನದ ಭಾಷಣದಲ್ಲಿ, ಪ್ರಸ್ತುತ ಮೂಲ ಹಣಕಾಸು ಸೇವೆಗಳಿಂದ ವಂಚಿತವಾಗಿರುವ ಬಹು ಸಂಖ್ಯೆಯ ಜನರನ್ನು ಗುರಿಪಡಿಸಿಕೊಂಡು, ಅವರನ್ನು ಹಣಕಾಸು ವ್ಯಾಪ್ತಿಯೊಳಗೆ ತರುವುದಕ್ಕೆ ವ್ಯಾಪಕವಾದ ಕಾರ್ಯಕ್ರಮವನ್ನು ಘೋಷಿಸಿದರು. ಇಲ್ಲಿಯವರೆಗೆ ಯಾವುದೇ ಖಾತೆಯನ್ನು ಹೊಂದಿರದ ಪ್ರತಿಯೊಂದು ಕುಟುಂಬಕ್ಕೆ ಮೂಲಭೂತ ಬ್ಯಾಂಕ್ ಖಾತೆಯನ್ನು ಒದಗಿಸುವ ಗುರಿಯನ್ನು ಪ್ರಧಾನಮಂತ್ರಿ ಜನ್ ಧನ್ ಯೋಜನಾ (ಪಿಎಂಜೆಡಿವೈ) ಹೊಂದಿದೆ. ಬ್ಯಾಂಕ್ ಖಾತೆಯ ಜೊತೆಗೆ ರುಪೇ ಡೆಬಿಟ್ ಕಾರ್ಡ್ ಒದಗಿಸಲಾಗುತ್ತದೆ ಮತ್ತು ಇದರೊಂದಿಗೆ 1 ಲಕ್ಷ ರೂಪಾಯಿ ವ್ಯಾಪ್ತಿಯ ಅಂತರ್ನಿರ್ಮಿತ ಅಪಘಾತ ವಿಮಾವ್ಯಾಪ್ತಿ ಇರುತ್ತದೆ.

15 ನೇ ಆಗಸ್ಟ್, 2014 ರಿಂದ 26 ನೇ ಜನವರಿ 2015 ರೊಳಗಿನ ಅವಧಿಯಲ್ಲಿ ಮೊದಲ ಬಾರಿಗೆ ಬ್ಯಾಂಕ್ ಖಾತೆಗೆ ಚಂದಾದಾರಾಗುವ ವ್ಯಕ್ತಿಗಳಿಗೆ ರುಪೇ ಕಾರ್ಡ್ ಜೊತೆಗೆ ರೂ. 30,000 ಮೌಲ್ಯದ ವಿಮಾ ರಕ್ಷಣೆಯನ್ನು ನೀಡಲಾಗುತ್ತದೆ ಎಂಬುದಾಗಿ ನವದೆಹಲಿಯಲ್ಲಿ 28.08.14 ರಂದು ಪಿಎಂಜೆಡಿವೈ ಯೋಜನೆಯ ಪ್ರಾರಂಭದ ಸಮಯದಲ್ಲಿ ಮಾನ್ಯ ಪ್ರಧಾನಮಂತ್ರಿಯವರು ಘೋಷಿಸಿದ್ದರು.

ಈ ರೂ. 30,000/- ಜೀವ ವಿಮಾ **ರಕ್ಷಣೆಯನ್ನು ಪ್ರಧಾನಮಂತ್ರಿ ಜನ್ ಧನ್ ಯೋಜನೆಯ ಅಡಿಯಲ್ಲಿ ವಿಮಾ ರಕ್ಷಣೆ ಎಂದು ಕರೆಯಲಾಗಿದ್ದು**, ಇದು ಯಾವುದೇ ಕಾರಣಕ್ಕಾಗಿ ವಿಮಾದಾರರು ಸಾವಿಗೀಡಾದರೆ, ವಿಮಾ ರಕ್ಷಣೆಯ ಹಣವನ್ನು ಅವರ ಕುಟುಂಬಕ್ಕೆ ಒದಗಿಸಲಾಗುತ್ತದೆ. ಯೋಜನೆಯು ಯಾವುದೇ ಸಾಮಾಜಿಕ ಭದ್ರತೆ ಯೋಜನೆಯ ಅಡಿಯಲ್ಲಿ ವಿಮಾ ರಕ್ಷಣೆಯನ್ನು ಪಡೆಯದ, ನೇರ ವಿಮೆಯ ಅನುಕೂಲತೆ ಪಡೆಯಲು ಶಕ್ತರಾಗದ ನಗರದ ಮತ್ತು ಗ್ರಾಮೀಣ ಬಡ ಕುಟುಂಬಗಳಿಗೆ ಭದ್ರತೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

## B. ವಿವರಣೆಗಳು

| | | |
|---|---|---|
| ಪಿಎಂಜೆಡಿವೈ | - | ಪ್ರಧಾನ್ ಮಂತ್ರಿ ಜನ್ ಧನ್ ಯೋಜನಾ |
| ಹೆಚ್ಓಎಫ್ | - | ಕುಟುಂಬದ ಮುಖ್ಯಸ್ಥರು |
| ರುಪೇ ಕಾರ್ಡ್ | - | ಪಿಎಂಜೆಡಿವೈ ಅಡಿಯಲ್ಲಿ ತೆರೆಯಲಾದ ಬಿಎಸ್‌ಬಿಡಿಎ ಖಾತೆಯ ಜೊತೆಯಲ್ಲಿ ಬ್ಯಾಂಕ್ ನೀಡಿದ ಡೆಬಿಟ್ ಕಾರ್ಡ್ |
| ಆಧಾರ್ ಕಾರ್ಡ್ | - | ಭಾರತದ ಅನನ್ಯ ಗುರುತಿನ ಪ್ರಾಧಿಕಾರ (ಯುಐಡಿಎಐ) ನೀಡಿರುವ ಬಯೋ-ಮೆಟ್ರಿಕ್ ಕಾರ್ಡ್ |
| ಐಟಿ ಕಾಯಿದೆ, 1961 | - | ಆದಾಯ ತೆರಿಗೆ ಕಾಯಿದೆ, 1961, ಭಾರತ ಸರ್ಕಾರ |
| ಆಮ್ ಆದ್ಮಿ ಬಿಮಾ ಯೋಜನಾ (ಎಎಬಿವೈ) | - | ಭಾರತದ ಸರ್ಕಾರದ, ಹಣಕಾಸು ಸಚಿವಾಲಯದ ಸಾಮಾಜಿಕ ಭದ್ರತಾ ಯೋಜನೆಯು ಖಾಯಂ ಮತ್ತು ಭಾಗಶಃ ಅಂಗವೈಕಲ್ಯತೆಗಾಗಿ ದೊರೆಯುವ ಪ್ರಯೋಜನಗಳ ಜೊತೆಗೆ ಸಾವಿನ ಸಂದರ್ಭದಲ್ಲಿ ರೂ. 30,000/-ಮತ್ತು |

| | | |
|---|---|---|
| | | ಅಪಘಾತದ ಸಾವಿನ ಸಂದರ್ಭದಲ್ಲಿ ರೂ. 75,000/-ವಿಮಾ ರಕ್ಷಣೆಯನ್ನು ಒದಗಿಸುತ್ತದೆ. |
| ಎಎಬಿವೈನ 48 ವೃತ್ತಿಗಳು | - | ಎಎಬಿವೈ ಲೈಫ್ ರಿಸ್ಕ್ ಕವರ್ ಅನ್ನು ಅನುಬಂಧ ಎ ನಲ್ಲಿ ಪಟ್ಟಿ ಮಾಡಲಾಗಿರುವ 48 ವೃತ್ತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಒದಗಿಸಲಾಗುತ್ತದೆ. |
| ಮೂಲಭೂತ ಅರ್ಹತೆಯ ಷರತ್ತುಗಳು | - | ಪಿಎಜೆಡಿವೈ ಅಡಿಯಲ್ಲಿ ಪ್ರಯೋಜನವನ್ನು ಪಡೆದುಕೊಳ್ಳಲು ಅರ್ಹತೆಯನ್ನು ಪಡೆಯುವುದಕ್ಕಾಗಿ ವ್ಯಕ್ತಿಯು ಪಾಲಿಸಬೇಕಾದ ಷರತ್ತುಗಳು |
| ಎಪಿಬಿಎಸ್ | - | ಆಧಾರ್ ಪಾವತಿಗಳ ಬ್ರಿಡ್ಜ್ ವ್ಯವಸ್ಥೆ |
| ಬಯೋ-ಮೆಟ್ರಿಕ್ ಕಾರ್ಡ್ | - | ಪಿಎಂಜಿಡಿವೈ ಅಡಿಯಲ್ಲಿ ಬಿಎಸ್‌ಬಿಡಿಎ ಖಾತೆಯನ್ನು ತೆರೆಯಲು ಆಧಾರ್ ಕಾರ್ಡ್ ಅಥವಾ ಸೂಕ್ತ ಪ್ರಾಧಿಕಾರವು ಒದಗಿಸಿದ ಯಾವುದೇ ಕಾರ್ಡನ್ನು ಬ್ಯಾಂಕ್ ಸ್ವೀಕರಿಸುತ್ತದೆ. |

## C. <u>ಯೋಜನೆಯ ಅಡಿಯಲ್ಲಿ ಪ್ರಯೋಜನಗಳು</u>

ಯೋಜನೆಯು ಅರ್ಹತೆಯ ಷರತ್ತುಗಳನ್ನು ಪೂರೈಸುವುದಕ್ಕೆ ಒಳಪಟ್ಟು ಫಲಾನುಭವಿಗೆ ರೂ 30,000/ ವಿಮಾ ರಕ್ಷಣೆಯ ಮೊತ್ತವನ್ನು ಒದಗಿಸುತ್ತದೆ ಮತ್ತು ಇದನ್ನು ಫಲಾನುಭವಿಯ ಸಾವಿನ ಸಂದರ್ಭದಲ್ಲಿ ಒದಗಿಸಲಾಗುತ್ತದೆ:

## D. <u>ಮೂಲಭೂತ ಅರ್ಹತೆಯ ಷರತ್ತುಗಳು</u>

i. 15-08-14 ರಿಂದ 26-01-15 ರವರೆಗೆ ಅಥವಾ ಭಾರತ ಸರ್ಕಾರವು ವಿಸ್ತರಿಸಬಹುದಾದ ಯಾವುದೇ ಹೆಚ್ಚುವರಿ ಅವಧಿಯವರೆಗೆ ಮೊದಲ ಬಾರಿಗೆ ಬ್ಯಾಂಕ್ ಖಾತೆಯನ್ನು ತೆರೆಯುತ್ತಿರುವ ವ್ಯಕ್ತಿಗೆ ನೀಡಲಾಗುತ್ತದೆ, ಜೊತೆಗೆ ಹೆಚ್ಚುವರಿಯಾಗಿ ರುಪೇ ಕಾರ್ಡ್ ಅನ್ನೂ ಸಹ ನೀಡಲಾಗುತ್ತದೆ.

ii. ವ್ಯಕ್ತಿಯು ಸಾಮಾನ್ಯವಾಗಿ ಕುಟುಂಬದ ಮುಖ್ಯಸ್ಥರಾಗಿರಬೇಕು ಅಥವಾ ಕುಟುಂಬದ ಆದಾಯ ಗಳಿಸುವ ವ್ಯಕ್ತಿಯಾಗಿರಬೇಕು ಮತ್ತು 18 ರಿಂದ 59 ವರ್ಷ (ಅಂದರೆ ವ್ಯಕ್ತಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಮತ್ತು ಅವರು 60 ವರ್ಷಗಳನ್ನು ದಾಟಿರಬಾರದು) ವಯಸ್ಸಿನ ವ್ಯಕ್ತಿಯಾಗಿರಬೇಕು. ಒಂದು ವೇಳೆ ಕುಟುಂಬದ ಮುಖ್ಯಸ್ಥರ ವಯಸ್ಸು 60 ವರ್ಷಗಳು ಅಥವಾ ಹೆಚ್ಚಾಗಿದ್ದರೆ, ಮೇಲಿನ ವಯಸ್ಸಿನ ಗುಂಪಿನಲ್ಲಿರುವ ಕುಟುಂಬದ ಎರಡನೆಯ ಆದಾಯಗಳಿಸುವ ವ್ಯಕ್ತಿಯನ್ನು, ಅರ್ಹತೆಗೆ ಒಳಪಟ್ಟು ವಿಮಾ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುತ್ತದೆ.

iii. ವ್ಯಕ್ತಿಯ ರುಪೇ ಕಾರ್ಡ್ ಮತ್ತು ಬಯೋ-ಮೆಟ್ರಿಕ್ ಕಾರ್ಡ್ ಅನ್ನು ಬ್ಯಾಂಕ್ ಖಾತೆಯೊಂದಿಗೆ ಸಂಪರ್ಕಪಡಿಸಿರಬೇಕು ಅಥವಾ ಈಗಾಗಲೇ ಹಾಗೆ ಮಾಡಿರದಿದ್ದರೆ ಸಂಪರ್ಕಪಡಿಸುವ ಪ್ರಕ್ರಿಯೆಯಲ್ಲಿರಬೇಕು.

iv. ಖಾತೆಯು ಸಣ್ಣ ಖಾತೆಯನ್ನು ಒಳಗೊಂಡಂತೆ ಯಾವುದೇ ಬ್ಯಾಂಕ್ ಖಾತೆಯಾಗಿರಬಹುದು.

v. ವಿಮಾ ರಕ್ಷಣೆಯು ಪರಿಣಾಮಕಾರಿಯಾಗಿರಲು, ಸದಸ್ಯರು ಸಾವನ್ನಪ್ಪಿದ ಸಂದರ್ಭದಲ್ಲಿ ಮೇಲಿನ ರುಪೇ ಕಾರ್ಡ್ ಮಾನ್ಯವಾಗಿರಬೇಕು ಮತ್ತು ಅದು ಜಾರಿಯಲ್ಲಿರಬೇಕು.

vi. ವಿಮಾ ಯೋಜನೆಯಲ್ಲಿ ಕುಟುಂಬದ ಒಬ್ಬ ವ್ಯಕ್ತಿಯು ಮಾತ್ರ ವಿಮಾ ರಕ್ಷಣೆಗೆ ಒಳಪಡುತ್ತಾರೆ ಮತ್ತು ಒಂದು ವೇಳೆ ವ್ಯಕ್ತಿಯು ಅನೇಕ ಕಾರ್ಡ್‌ಗಳನ್ನು/ಖಾತೆಗಳನ್ನು ಹೊಂದಿದ್ದರೆ, ಪ್ರಯೋಜನವನ್ನು ಒಂದು ಕಾರ್ಡ್ ಅಡಿಯಲ್ಲಿ ಮಾತ್ರ ಒದಗಿಸಲಾಗುತ್ತದೆ, ಅಂದರೆ ಪ್ರತಿ ಕುಟುಂಬದಲ್ಲಿ ಓರ್ವ ವ್ಯಕ್ತಿಯು ಅರ್ಹತೆಯ ಷರತ್ತುಗಳಿಗೆ ಒಳಪಟ್ಟು ರೂ. 30,000/-ಮೌಲ್ಯದ ಏಕೈಕ ವಿಮಾ ರಕ್ಷಣೆಯನ್ನು ಪಡೆಯುತ್ತಾರೆ.

vii. ಯೋಜನೆಯ ಅಡಿಯಲ್ಲಿ ರೂ. 30,000/ ಮೌಲ್ಯದ ವಿಮಾ ರಕ್ಷಣೆಯು ಪ್ರಾರಂಭಿಕವಾಗಿ 5 ವರ್ಷಗಳ ಕಾಲಾವಧಿಯವರೆಗೆ ಇರುತ್ತದೆ, ಅಂದರೆ 2019-20 ಹಣಕಾಸು ವರ್ಷದ ಮುಕ್ತಾಯದವರೆಗೆ ಇರುತ್ತದೆ. ಆ ನಂತರ, ಯೋಜನೆಯನ್ನು ಪರಾಮರ್ಶಿಸಲಾಗುತ್ತದೆ ಮತ್ತು ವಿಮಾದಾರರು ಮಾಡುವ ಭವಿಷ್ಯದ ಪ್ರೀಮಿಯಂನ ಪಾವತಿಯನ್ನು ಒಳಗೊಂಡು ಅದರ ಮುಂದುವರಿಕೆಯ ನಿಯಮಗಳು ಮತ್ತು ಷರತ್ತುಗಳನ್ನು ಸೂಕ್ತವಾಗಿ ನಿರ್ಣಯಿಸಲಾಗುತ್ತದೆ.

viii. ಒಂದು ವೇಳೆ ಪಿಎಂಜೆಡಿವೈ ಖಾತೆಯನ್ನು ಜಂಟಿಯಾಗಿ ಹೊಂದಿದ್ದರೆ, ಆಗ ಮೊದಲನೆಯ ಖಾತೆದಾರರು, ಅಂದರೆ ಪ್ರಾಥಮಿಕ ಖಾತೆದಾರರು ಅರ್ಹತೆಯ ಷರತ್ತುಗಳಿಗೆ ಒಳಪಟ್ಟು ವಿಮಾ ರಕ್ಷಣೆಗೆ ಅರ್ಹರಾಗಿರುತ್ತಾರೆ.

## E. <u>ಅನರ್ಹ ವರ್ಗಗಳು</u>

i. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಉದ್ಯೋಗಿಗಳು (ಸೇವೆಯಲ್ಲಿರುವವರು ಅಥವಾ ನಿವೃತ್ತರಾದವರು) ಮತ್ತು ಅವರ ಕುಟುಂಬದವರು.

ii. ಸಾರ್ವಜನಿಕ ವಲಯದ ಸಂಸ್ಥೆಗಳು, ಸಾರ್ವಜನಿಕ ವಲಯದ ಬ್ಯಾಂಕುಗಳು, ಕೇಂದ್ರ ಸರ್ಕಾರದ ಮಾಲೀಕತ್ವದ ಯಾವುದೇ ಸಂಸ್ಥೆ, ರಾಜ್ಯ ಸರ್ಕಾರದ ಮಾಲೀಕತ್ವದ ಸಂಸ್ಥೆ ಅಥವಾ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜಂಟಿ ಮಾಲೀಕ್ವದ ಯಾವುದೇ ಸಂಸ್ಥೆಯ ಉದ್ಯೋಗಿಗಳು (ಸೇವೆಯಲ್ಲಿರುವವರು ಅಥವಾ ನಿವೃತ್ತರಾದವರು) ಮತ್ತು ಅವರ ಕುಟುಂಬದವರು.

iii. ಐ.ಟಿ. ಕಾಯಿದೆ 1961 ಅಡಿಯಲ್ಲಿ ತೆರಿಗೆಗೆ ಒಳಪಟ್ಟಿರುವ ಆದಾಯ ಹೊಂದಿರುವವರು ಅಥವಾ ವಾರ್ಷಿಕವಾಗಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸುತ್ತಿರುವವರು ಅಥವಾ ಆದಾಯದಿಂದ ಟಿಡಿಎಸ್ ಕಡಿತಕ್ಕೆ ಒಳಪಡುತ್ತಿರುವವರು ಮತ್ತು ಅವರ ಕುಟುಂಬದವರು.

iv. ಯೋಜನೆಯ ಅಡಿಯಲ್ಲಿ ನಿರೂಪಿಸಲಾಗಿರುವ 48 ವೃತ್ತಿಗಳನ್ನು ಒಳಪಟ್ಟಿರುವ ಆಮ್ ಆದ್ಮಿ ಬಿಮಾ ಯೋಜನೆಯಲ್ಲಿ ಒಳಪಟ್ಟಿರುವ ವ್ಯಕ್ತಿಗಳು ಮತ್ತು ಅವರ ಕುಟುಂಬದವರು.

v. ಇಲ್ಲವೇ ಖಾತೆಗೆ ಪ್ರತಿಯಾಗಿ ಬ್ಯಾಂಕಿನ ಇತರ ಯಾವುದೇ ಯೋಜನೆಯ ಕಾರಣದಿಂದ ವಿಮಾ ರಕ್ಷಣೆಯನ್ನು ಹೊಂದಿರುವ ಅರ್ಹ ಖಾತೆದಾರರು ಎರಡರಲ್ಲಿ ಒಂದು ಯೋಜನೆಯನ್ನು ಆಯ್ಕೆಮಾಡಿಕೊಳ್ಳಬೇಕು ಮತ್ತು ಅವರು ಕೇವಲ ಒಂದರಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ.

vi. ಯೋಜನೆಯ ಮೂಲ ಅರ್ಹತೆಯ ಷರತ್ತುಗಳನ್ನು ಪೂರೈಸದ ಎಲ್ಲಾ ವ್ಯಕ್ತಿಗಳು.

**F. ಯೋಜನೆ ರದ್ದುಗೊಳಿಸುವುದು**

ವ್ಯಕ್ತಿಗೆ 60 ವರ್ಷ ತುಂಬಿದಾಗ, ಅಂದರೆ ವ್ಯಕ್ತಿಗೆ 60 ವರ್ಷದ ಪೂರ್ಣಗೊಂಡ ದಿನ ಅಥವಾ ಯೋಜನೆಯು ಮುಕ್ತಾಯವಾದಾಗ, ಇವುಗಳಲ್ಲಿ ಯಾವುದು ಮೊದಲೋ ಆಗ ಅವರು ಯೋಜನೆಯಿಂದ ವಂಚಿತರಾಗುತ್ತಾರೆ.

**G. ಕ್ಲೈಮ್ ಇತ್ಯರ್ಥಪಡಿಸುವ ಕಾರ್ಯವಿಧಾನ**

a) ರೂ. 30,000/-ಕ್ಲೈಮ್ ಮೊತ್ತವನ್ನು ಖಾತೆದಾರರ ನಾಮನಿರ್ದೇಶಿತರು/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಪಾವತಿಸಲಾಗುತ್ತದೆ. ವ್ಯಕ್ತಿಗೆ ವಿಮಾ ರಕ್ಷಣೆಯನ್ನು ಅವರಿಗೆ 18 ವರ್ಷವಾದಾಗಿನಿಂದ (ಪೂರ್ಣಗೊಂಡಾಗ) ಅವರಿಗೆ 60 ವರ್ಷ ತುಂಬುವ ತನಕ ಒದಗಿಸಲಾಗುತ್ತದೆ, ಅಂದರೆ ಅರ್ಹತೆಯು 60 ವರ್ಷ ಪೂರ್ಣಗೊಂಡಾದ ಮುಕ್ತಾಯಗೊಳ್ಳುತ್ತದೆ ಮತ್ತು ವ್ಯಕ್ತಿಗೆ 60 ವರ್ಷಗಳ ವಯಸ್ಸು ಪೂರ್ಣಗೊಂಡಾಗ ಅವರು ಯೋಜನೆಯಿಂದ ನಿರ್ಗಮಿಸುತ್ತಾರೆ.

b) ರೂ. 30000/- ಸಾವಿನ ಕ್ಲೈಮ್ ಪ್ರಯೋಜನವನ್ನು ಎಲ್ಐಸಿಯ ನಿಯೋಜಿತ ಪೆನ್ಶನ್ & ಪೆನ್ಶನ್ ಸ್ಕೀಮ್ (ಪಿ&ಜಿಎಸ್) ಕಚೇರಿಯು ಇತ್ಯರ್ಥಪಡಿಸುತ್ತದೆ. ಅನುಸರಿಸಲಾಗುವ ಕಾರ್ಯವಿಧಾನವು ಈ ಕೆಳಕಂಡಂತೆ ಇರುತ್ತದೆ:

i. ಕ್ಲೈಮ್‌ಗಳನ್ನು ಪ್ರಕ್ರಿಯೆಗೊಳಿಸುವ ಈ ಉದ್ದೇಶಕ್ಕಾಗಿ ಅನುಬಂಧ ಬಿ ಪ್ರಕಾರ ಕ್ಲೈಮ್ ಕಾಗದಪತ್ರಗಳನ್ನು ಸಂಬಂಧಿತ ಬ್ಯಾಂಕಿನ ಜಿಲ್ಲಾ ಶಾಖೆ/ನೋಡಲ್ ಶಾಖೆಯು ಹತ್ತಿರದ ಎಲ್ಐಸಿ ನಿಯೋಜಿತ ಪೆನ್ಶನ್ & ಗ್ರೂಪ್ ಸ್ಕೀನ್ ಘಟಕ (ಪಿ&ಜಿಎಸ್ ಘಟಕ)ಕ್ಕೆ ಸಲ್ಲಿಸಲಾಗುತ್ತದೆ. ಪಿ&ಜಿಎಸ್ ಘಟಕಗಳ ಪಟ್ಟಿಯನ್ನು ಅನುಬಂಧ ಡಿ ನಲ್ಲಿ ಲಗತ್ತಿಸಲಾಗಿದೆ.

ii. ಕ್ಲೈಮ್ ಅನ್ನು ಬ್ಯಾಂಕ್ ಖಾತೆಯಲ್ಲಿ ನಾಮನಿರ್ದೇಶಿತರಾದ ನಾಮನಿರ್ದೇಶಿತರಿಗೆ ಪಾವತಿಸಲಾಗುತ್ತದೆ. ನಾಮನಿರ್ದೇಶನವು ಇಲ್ಲದಿದ್ದರೆ ಅಥವಾ ನಾಮನಿರ್ದೇಶಿತರು ವಿಮಾದಾರರಿಗಿಂತ ಮುಂಚಿತವಾಗಿ ಮರಣಹೊಂದಿದ್ದರೆ ಅಥವಾ ನಾಮನಿರ್ದೇಶಿತರು ಸಂಗಾತಿ, ಮಗು ಅಥವಾ ಪೋಷಕರಾಗಿಲ್ಲದಿದ್ದರೆ, ಆಗ ಖಾತೆದಾರರ ಕಾನೂನುಬದ್ಧ ಉತ್ತರಾಧಿಕಾರಿಗಳು ಎಲ್ಐಸಿಯ ಸೂಚಿತ ನಮೂನೆಯಲ್ಲಿ (ಅನುಬಂಧ ಸಿ1 ಮತ್ತು ಸಿ2 ನಲ್ಲಿ ನೀಡಲಾಗಿದೆ) ಕಾನೂನುಬದ್ಧ ಪುರಾವೆಯನ್ನು ಒದಗಿಸಲು ಇಂಡಮ್ನಿಟಿ ಬಾಂಡ್ ಸಲ್ಲಿಸಬೇಕು.

iii. ಕ್ಲೈಮ್ ಮೊತ್ತವನ್ನು ಎಪಿಬಿಸ್ ಮೂಲಕ ನಾಮನಿರ್ದೇಶಿತರು/ಕಾನೂನುಬದ್ಧ ಉತ್ತರಾಧಿಕಾರಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ, ಅಂದರೆ ಮೊತ್ತವನ್ನು ಆಧಾರ್ ಕಾರ್ಡ್ ಸಂಖ್ಯೆಗೆ ಸಂಪರ್ಕಕಲ್ಪಿಸಲಾದ ಖಾತೆಗೆ ಜಮಾ ಮಾಡಲಾಗುತ್ತದೆ.

iv. ಒಂದು ವೇಳೆ ಕ್ಲೈಮ್ ಅರ್ಜಿಯನ್ನು ಹಕ್ಕುದಾರರು ನೇರವಾಗಿ ಯಾವುದೇ ಎಲ್ಐಸಿ ಕಚೇರಿಗೆ ಸಲ್ಲಿಸಿದರೆ, ಆಗ ಎಲ್ಐಸಿ ಕಚೇರಿಯು ಅದನ್ನು ಸಂಬಂಧಿಸಿದ ಬ್ಯಾಂಕಿನಿಂದ ಅಗತ್ಯ ಪರಿಶೀಲನೆಯನ್ನು ಪಡೆದುಕೊಳ್ಳುವುದಕ್ಕಾಗಿ ತಕ್ಷಣವೇ ಮೃತಪಟ್ಟ ಖಾತೆದಾರರ ಸಂಬಂಧಿತ ಬ್ಯಾಂಕ್‌ಗೆ ರವಾನಿಸಲಾಗುತ್ತದೆ. ಸಂಬಂಧಿತ ಬ್ಯಾಂಕ್ ಖಾತೆಯು ಕ್ಲೈಮ್ ಅರ್ಜಿಯನ್ನು ಕ್ಲೈಮ್ ಪ್ರಕ್ರಿಯೆಗೊಳಿಸುವುದಕ್ಕಾಗಿ ಎಲ್ಐಸಿಯ ಹತ್ತಿರದ ಪಿ&ಜಿಸ್ ಘಟಕಕ್ಕೆ ರವಾನಿಸುತ್ತದೆ.

**H.** **<u>ಸಾವಿನ ಕುರಿತಾದ ಕ್ಲೈಮ್ ಸೂಚನೆಯನ್ನು ಪಡೆದಾಗ ಬ್ಯಾಂಕುಗಳು ಅನುಸರಿಸುವ ಕಾರ್ಯವಿಧಾನ</u>**

ಪಿಎಂಜೆಡಿವೈ ಉಳಿತಾಯ ಖಾತೆಯನ್ನು ಪ್ರಾರಂಭದಲ್ಲಿ ತೆರೆಯಲಾದ ಬ್ಯಾಂಕಿನ ಸಂಬಂಧಿತ ಶಾಖೆಯು ಎಲ್ಐಸಿಯೊಂದಿಗೆ ಕ್ಲೈಮ್ ಅನ್ನು ಸಲ್ಲಿಸಬೇಕು. ಕ್ಲೈಮ್ ಸಲ್ಲಿಸುವ ಸಂದರ್ಭದಲ್ಲಿ, ಅದನ್ನು ರವಾನಿಸುವ ಬ್ಯಾಂಕ್ ಶಾಖೆಯು ಮೂಲಭೂತವಾಗಿ ಕ್ಲೈಮ್ ಅನ್ನು ಪಾವತಿಸುವಂತಹುದೇ ಅಥವಾ ಅರ್ಹತೆಯ ಷರತ್ತುಗಳಿಗೆ ಆಧಾರಿತವಾಗಿಲ್ಲವೇ ಎಂಬುದನ್ನು ಪರಿಶೀಲಿಸುತ್ತದೆ. ಈ ಉದ್ದೇಶಕ್ಕಾಗಿ, ಮುಂದಿನ ದಾಖಲೆಗಳನ್ನು ಒದಗಿಸಬೇಕಾಗುತ್ತದೆ:-

1. ಸಾವಿಗೀಡಾದ ಸದಸ್ಯರ ಸಾವಿನ ಪ್ರಮಾಣಪತ್ರದ ದೃಢೀಕೃತ ಪ್ರತಿ.
2. ಜನ್ಮ ದಿನಾಂಕದ ಪ್ರಕಾರವಾಗಿ ಖಾತೆದಾರರ ವಯಸ್ಸನ್ನು ನಿರ್ಣಯಿಸಲು ಮರಣಿಸಿದ ವ್ಯಕ್ತಿಯ ಆಧಾರ್ ಕಾರ್ಡ್‌ನ ನಕಲು ಪ್ರತಿ. ಆಧಾರ್ ಕಾರ್ಡ್ ನೀಡದೇ ಇದ್ದರೆ, <u>ಈ ಕೆಳಗಿನ ಯಾವುದೇ ಒಂದು ವಯಸ್ಸಿನ ಪುರಾವೆಯ ನಕಲು ಪ್ರತಿಯನ್ನು ನೀಡಬೇಕಾಗುತ್ತದೆ</u> :-

    a) ಜನನ ನೋಂದಣಾಧಿಕಾರಿಗಳು ನೀಡುವ ಜನನ ಪ್ರಮಾಣಪತ್ರ

    b) ಶಾಲಾ ಪ್ರಮಾಣಪತ್ರ

    c) ರೇಷನ್ ಕಾರ್ಡ್

    d) ಮತದಾರರ ಗುರುತಿನ ಕಾರ್ಡ್

    ಸಾವಿನ ದಿನಾಂಕಕ್ಕೂ ಮೊದಲು ಮರಣಿತರು 60 ವರ್ಷ ವಯಸ್ಸನ್ನು ಪೂರ್ಣಗೊಳಿಸಿದ್ದರೆ, ಆಗ ಜೀವ ವಿಮೆಯ ಪ್ರಯೋಜನವು ವ್ಯಕ್ತಿಗೆ ಲಭ್ಯವಿರುವುದಿಲ್ಲ. ಆದ್ದರಿಂದ, ಸಾವಿನ ದಿನಾಂಕದ ವಯಸ್ಸು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

3. ರುಪೇ ಕಾರ್ಡ್‌ನ ಮಾನ್ಯತೆ ಮತ್ತು ಜಾರಿ ಸ್ಥಿತಿಯ ಪರಿಶೀಲನೆ (ರುಪೇ ಕಾರ್ಡ್ ಅನ್ನು ನಿರ್ಬಂಧಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು).
4. ಮರಣಿತ ವ್ಯಕ್ತಿಯ ಬಿಪಿಎಲ್ ಕಾರ್ಡ್ ಅಥವಾ ರೇಷನ್ ಕಾರ್ಡ್ ಸಹಾಯದಿಂದ 'ಕುಟುಂಬದ ಮುಖ್ಯಸ್ಥ' ಸ್ಥಿತಿಯ ಮತ್ತು ವ್ಯಕ್ತಿಯು ಕುಟುಂಬದ ಆದಾಯ ಗಳಿಸುವ ಸದಸ್ಯರೇ ಎಂಬುದನ್ನು ಪರಿಶೀಲಿಸುವುದು
5. ಮರಣಿತರು ಪ್ಯಾರಾ ಇ ನಲ್ಲಿ ನೀಡಲಾಗಿರುವ ಅರ್ಹರಾಗಿಲ್ಲದ ಷರತ್ತುಗಳ ಪ್ರಕಾರ ಅರ್ಹರಲ್ಲ ಎಂಬುದನ್ನು ಪರಿಶೀಲಿಸುವುದು.
6. ಸಾವನ್ನಪ್ಪಿದ ವ್ಯಕ್ತಿಗಳು ಬ್ಯಾಂಕಿನಲ್ಲಿ ಖಾತೆಗೆ ಪ್ರತಿಯಾಗಿ ಬ್ಯಾಂಕಿನ ಇತರ ಯಾವುದೇ ಜೀವ ವಿಮೆಯ ಅಡಿಯಲ್ಲಿ ವಿಮಾ ರಕ್ಷಣೆ ಪಡೆದಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದು, ಏಕೆಂದರೆ ಪ್ರಯೋಜನವನ್ನು ಯಾವುದೇ ಒಂದು ಯೋಜನೆಯ ಅಡಿಯಲ್ಲಿ ಮಾತ್ರ ಒದಗಿಸಲಾಗುತ್ತದೆ.
7. ಪಿಎಂಜೆಡಿವೈ ಅಡಿಯಲ್ಲಿ ಜಂಟಿ ಖಾತೆದಾರರಾಗಿದ್ದರೆ, ಮೊದಲನೇ ಖಾತೆದಾರರಿಗೆ (ಪ್ರಾಥಮಿಕ ಖಾತೆದಾರರು) ಅರ್ಹತೆಯ ಷರತ್ತುಗಳಿಗೆ ಒಳಪಟ್ಟು ವಿಮಾ ರಕ್ಷಣೆಯನ್ನು ಒದಗಿಸಲಾಗುತ್ತದೆ.

8. ಕ್ಲೈಮ್ ಅರ್ಜಿ ಜೊತೆಗೆ ಭರ್ತಿ ಮಾಡಿದ ಬಿಡುಗಡೆಯ ಸ್ವೀಕೃತಿ (ಅನುಬಂಧ ಬಿ ನಲ್ಲಿ ನೀಡಲಾಗಿರುವಂತೆ) :– ಕ್ಲೈಮ್ ಅರ್ಜಿಯ ಭಾಗ ಎ ಅನ್ನು ನಾಮನಿರ್ದೇಶಿತರು/ಕಾನೂನುಬದ್ಧ ಉತ್ತರಾಧಿಕಾರಿ/ಹಕ್ಕುದಾರರು ಭರ್ತಿ ಮಾಡಬೇಕು. ಬ್ಯಾಂಕಿನ ಅಧಿಕೃತ ಅಧಿಕಾರಿಯು ಭಾಗ ಬಿ ಭರ್ತಿ ಮಾಡಬೇಕು. ಅಧಿಕಾರಿಯು ಭಾಗ ಸಿ ನಲ್ಲಿ ಹಕ್ಕುದಾರರ ಸಹಿಯನ್ನು ಸಾಕ್ಷೀಕರಿಸಬೇಕು. ಕ್ಲೈಮ್ ಅರ್ಜಿಯ ಸೂಕ್ತ ಸ್ಥಳಗಳಲ್ಲಿ ಬ್ಯಾಂಕಿನ ಮೊಹರನ್ನು ಲಗತ್ತಿಸಬೇಕು. ನಾಮನಿರ್ದೇಶನವು ಇಲ್ಲದಿದ್ದರೆ ಅಥವಾ ನಾಮನಿರ್ದೇಶಿತರು ವಿಮಾದಾರರಿಗಿಂತ ಮುಂಚಿತವಾಗಿ ಮರಣಹೊಂದಿದ್ದರೆ ಅಥವಾ ನಾಮನಿರ್ದೇಶಿತರು ಸಂಗಾತಿ, ಮಗು ಅಥವಾ ಪೋಷಕರಾಗಿಲ್ಲದಿದ್ದರೆ, ಆಗ ಖಾತೆದಾರರ ಕಾನೂನುಬದ್ಧ ಉತ್ತರಾಧಿಕಾರಿಗಳು ಎಲ್ಐಸಿಯ ಸೂಚಿತ ನಮೂನೆಯಲ್ಲಿ (ಅನುಬಂಧ ಸಿ1 ಮತ್ತು ಸಿ2 ನಲ್ಲಿ ನೀಡಲಾಗಿದೆ) ಕಾನೂನುಬದ್ಧ ಪುರಾವೆಯನ್ನು ಒದಗಿಸಲು ಇಂಡಮ್ನಿಟಿ ಬಾಂಡ್ ಸಲ್ಲಿಸಬೇಕು.

9. ಭರ್ತಿಮಾಡಿದ ಕ್ಲೈಮ್ ಅರ್ಜಿಯನ್ನು (ಭಾಗ ಎ, ಬಿ & ಸಿ) ಮುಂದಿನ ದಾಖಲೆಗಳೊಂದಿಗೆ ಹತ್ತಿರದ ಎಲ್ಐಸಿಯ ಪಿ&ಜಿಎಸ್ ಘಟಕಕ್ಕೆ ರವಾನಿಸಬೇಕು.

   a) ಸಾವನ್ನಪ್ಪಿದ ವ್ಯಕ್ತಿಯ ಮರಣ ಪ್ರಮಾಣಪತ್ರದ ದೃಢೀಕರಣ ಪ್ರತಿ.

   b) ಸಾವನ್ನಪ್ಪಿದ ವ್ಯಕ್ತಿಯ ಆಧಾರ್ ಕಾರ್ಡ್‌ನ ದೃಢೀಕರಣ ಪ್ರತಿ.

   c) ಹಕ್ಕುದಾರರ ಆಧಾರ್ ಕಾರ್ಡ್‌ನ ದೃಢೀಕೃತ ನಕಲು.

ಮೇಲೆ ನಮೂದಿಸಿದ ಎಲ್ಲಾ ದಾಖಲೆಗಳ ಜೊತೆಯಲ್ಲಿ ಕ್ಲೈಮ್ ಅರ್ಜಿಯನ್ನು ನಮ್ಮ ಪಿ&ಜಿಎಸ್ ಘಟಕದಲ್ಲಿ ಸ್ವೀಕರಿಸಿದಾಗ, ಪಿ&ಜಿಎಸ್ ಘಟಕವು ಅರ್ಹತೆಗೆ ಒಳಪಟ್ಟು ನಾಮನಿರ್ದೇಶಿತರು/ಕಾನೂನುಬದ್ಧ ಉತ್ತರಾಧಿಕಾರಿಗಳ ಹೆಸರಿನಲ್ಲಿ, ಸಾವಿನ ಕ್ಲೈಮ್‌ನ ವ್ಯವಹಾರದ ಹಣವನ್ನು ಆಧಾರ್ ಸಂಪರ್ಕಿತ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೂಲಕ ಕ್ಲೈಮ್ ಇತ್ಯರ್ಥಪಡಿಸುತ್ತದೆ.

## I. <u>ಕ್ಲೈಮ್ ಸೂಚನೆಯನ್ನು ಸ್ವೀಕರಿಸಿದಾಗ ಎಲ್ಐಸಿ ಅನುಸರಿಸುವ ಕಾರ್ಯವಿಧಾನ</u>

ಬ್ಯಾಂಕುಗಳಿಂದ ಕ್ಲೈಮ್ ಅರ್ಜಿಯನ್ನು ಸಲ್ಲಿಸಿದಾಗ, ಅಗತ್ಯ ಆಂತರಿಕ ಪ್ರಕ್ರಿಯೆಯನ್ನು ನಿರ್ವಹಿಸಿದ ನಂತರ, ಪಿ&ಜಿಎಸ್ ಘಟಕದ ಬಳಕೆದಾರರು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ:

1. ಎಲ್ಲಾ ರೀತಿಯಲ್ಲಿ ಕ್ಲೈಮ್ ಅರ್ಜಿಯನ್ನು ಭರ್ತಿ ಮಾಡಲಾಗಿದೆ ಮತ್ತು ಸಾವನ್ನಪ್ಪಿದ ವ್ಯಕ್ತಿಗಳು ಬ್ಯಾಂಕು ಸಲ್ಲಿಸಿದ ದಾಖಲೆಗಳ ಆಧಾರದಲ್ಲಿ ಅರ್ಹತೆಯ ಮಾನದಂಡವನ್ನು ಪೂರೈಸಿದ್ದಾರೆ ಎಂಬುದನ್ನು ಪರಿಶೀಲಿಸುವುದು.

2. ಕ್ಲೈಮ್ ಪಾವತಿಸುವಂತಿದ್ದರೆ, ಬಳಕೆದಾರರು ಪಿಎಂಜೆಡಿವೈಗಾಗಿ (ಪ್ರಧಾನ ಮಂತ್ರಿ ಜನ್ ಧನ್ ಯೋಜನಾ) ಕ್ಲೈಮ್ ಮಾಡ್ಯೂಲ್‌ಗೆ ಲಾಗ್ ಇನ್ ಮಾಡುತ್ತಾರೆ. ಸಂಬಂಧಿತ ಡೇಟಾವನ್ನು ಮಾಡ್ಯೂಲ್‌ನಲ್ಲಿ ನಮೂದಿಸಲಾಗುತ್ತದೆ.

3. ಎರಡು ಅಂಶಗಳನ್ನು ಪರಿಶೀಲಿಸುವುದಕ್ಕಾಗಿ ಸಿಸ್ಟಂನಲ್ಲಿ ಪ್ರಶ್ನೆಗಳನ್ನು ಮಾಡ್ಯೂಲ್ ರಚಿಸುತ್ತದೆ

   a) ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಬಾರಿ ಕ್ಲೈಮ್ ಪಾವತಿಯನ್ನು ತಡೆಗಟ್ಟುವುದಕ್ಕಾಗಿ ಅದೇ ವ್ಯಕ್ತಿಗೆ ಹಿಂದೆ ಕ್ಲೈಮ್ ಪಾವತಿಸಲಾಗಿದೆಯೇ.

   b) ಸಾವನ್ನಪ್ಪಿದ ವ್ಯಕ್ತಿಯು ಆಮ್ ಆದ್ಮಿ ಬಿಮಾ ಯೋಜನಾ ಅಡಿಯಲ್ಲಿಯೂ ವಿಮಾ ರಕ್ಷಣೆಗೆ ಒಳಪಟ್ಟಿದ್ದಾರೆಯೇ.

4. ಪ್ರಶ್ನೆಯು ಎರಡು ಮೂಲಗಳಿಂದ ಫಲಿತಾಂಶವನ್ನು ನೀಡುತ್ತದೆ, ಅವುಗಳು ಸಮರ್ಥನೀಯವಾಗಿಯೂ ಅಥವಾ ಋಣಾತ್ಮಕವಾಗಿಯೂ ಇರಬಹುದು.

5. ಫಲಿತಾಂಶವು ಸಮರ್ಥನೀಯವಾಗಿದ್ದರೆ, ಬಳಕೆದಾರರನ್ನು ಪರಿಶೀಲಿಸಲು ದಾಖಲೆಯ ಪಟ್ಟಿಯನ್ನು ಮಾಡ್ಯೂಲ್ ರಚಿಸುತ್ತದೆ. ಹಸ್ತಚಾಲಿತವಾಗಿ ಪರಿಶೀಲನೆ ಮಾಡಿದ ನಂತರ, ಅದೇ ವ್ಯಕ್ತಿಯ ಮೇಲಿನ ಕ್ಲೈಮ್ ಅನ್ನು ಈ ಮುಂಚೆ ಪಾವತಿಸಲಾಗಿಲ್ಲ ಎಂಬುದಾಗಿ ಅಥವಾ ಸಾವನ್ನಪ್ಪಿದ ವ್ಯಕ್ತಿಯು ಎಎಬಿವೈ ಅಡಿಯಲ್ಲಿ ವಿಮಾ ವ್ಯಾಪ್ತಿಗೆ ಒಳಪಟ್ಟಿಲ್ಲ ಎಂಬುದಾಗಿ ಖಾತ್ರಿಯಾದರೆ, ಅದನ್ನು ಸೂಪರ್‌ವೈಸರ್ ದೃಢೀಕರಿಸಬೇಕಾಗುತ್ತದೆ. ಸೂಪರ್‌ವೈಸರ್ ಅವರು ದೃಢೀಕರಿಸಿದ ನಂತರ, ಬಳಕೆದಾರರು ಕ್ಲೈಮ್ ಇತ್ಯರ್ಥಪಡಿಸುವಿಕೆಯ ಕಾರ್ಯಕ್ಕೆ ಮುಂದುವರಿಯಬಹುದು.

6. ಮೇಲಿನ ಪ್ರಕ್ರಿಯೆಯು ಪಿಎಂಜೆಡಿವೈ ಮತ್ತು ಎಎಬಿವೈ ಅಡಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಕಲು ಕ್ಲೈಮ್ ಪಾವತಿಸದಿರುವಿಕೆಯನ್ನು ಖಾತ್ರಿಪಡಿಸುತ್ತದೆ. ಸಾವನ್ನಪ್ಪಿದ ವ್ಯಕಿಯ ಮತ್ತು ಹಕ್ಕುದಾರರ ಆಧಾರ್ ಕಾರ್ಡ್ ಸಂಖ್ಯೆಯನ್ನೂ ಸಹ ಡೀ-ಡುಪ್ಲಿಕೇಶನ್ ಉದ್ದೇಶಕ್ಕೆ ಬಳಸಲಾಗಬಹುದು.

7. ಒಂದು ವೇಳೆ ಫಲಿತಾಂಶವು ಋಣಾತ್ಮಕವಾಗಿದ್ದರೆ, ಕ್ಲೈಮ್ ಇತ್ಯರ್ಥಪಡಿಸುವಿಕೆಗೆ ಮುಂದುವರಿಯುವುದಕ್ಕೆ ಬಳಕೆದಾರರಿಗೆ ಮಾಡ್ಯೂಲ್ ಅನುಮತಿಸುತ್ತದೆ.

ಕ್ಲೈಮ್ ಪಾವತಿಯ ರಿಜಿಸ್ಟರ್‌ಗಳು ಮತ್ತು ದಾಖಲೆಗಳನ್ನು ಎಎಬಿವೈ ಕ್ಲೈಮ್‌ಗಳಿಗೆ ಮಾಡುವ ರೀತಿಯಲ್ಲಿಯೇ ನಿರ್ವಹಣೆ ಮಾಡಲಾಗುತ್ತದೆ. ಪಿಎಂಜೆಡಿವೈ ಅಡಿಯಲ್ಲಿ ಡಿಎಬಿ ಮತ್ತು ಅಂಗವೈಕಲ್ಯತೆ ಪ್ರಯೋಜನಗಳನ್ನು ಪಾವತಿಸಲಾಗದೇ ಇರುವುದರಿಂದ, ಸಂಬಂಧಿತ ಕಾಲಂಗಳನ್ನು ಹೊರತುಪಡಿಸಬೇಕಾಗುತ್ತದೆ.

**J.** ಕ್ಲೈಮ್ ನಮೂನೆಯನ್ನು www.licindia.in, www.iba.org.in, http://financialservices.gov.in, www.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

**K.** <u>ಅನುಬಂಧಗಳ ಪಟ್ಟಿ</u>

| | | |
|---|---|---|
| ಅನುಬಂಧ ಎ | - | ಆಮ್ ಆದ್ಮಿ ಬಿಮಾ ಯೋಜನಾ ಅಡಿಯಲ್ಲಿನ 48 ವೃತ್ತಿಗಳ ಪಟ್ಟಿ |
| ಅನುಬಂಧ ಬಿ | - | ಎಲ್ಐಸಿಯ ಕ್ಲೈಮ್ ನಮೂನೆ ಮತ್ತು ಬಿಡುಗಡೆ ಸ್ವೀಕೃತಿ. |
| ಅನುಬಂಧ ಸಿ1 | - | ಕಾನೂನು ಪುರಾವೆಯ ದಾಖಲೆಯ ಜೊತೆಗೆ ಅರ್ಜಿಯ ನಮೂನೆಯನ್ನು ನೀಡಬೇಕು. |
| ಅನುಬಂಧ ಸಿ2 | - | ಕಾನೂನು ಪುರಾವೆಯ ದಾಖಲೆಯ ಜೊತೆಗೆ ಇಂಡೆಮ್ನಿಟಿ ಬಾಂಡ್‌ನ ಎಲ್ಐಸಿಯ ನಮೂನೆಯನ್ನು ನೀಡಬೇಕು |
| ಅನುಬಂಧ ಡಿ | - | ಕ್ಲೈಮ್ ನಮೂನೆಗಳ ಸಲ್ಲಿಕೆಗಾಗಿ ಪಿ&ಜಿಎಸ್ ಘಟಕಗಳ ಪಟ್ಟಿ. |